2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸ್ಪೇಷಲ್ ಕೇಸ್ ನಂ.594/2025
ಪಿ.ಡಬ್ಲ್ಯೂಃ 3
ಸಿ.ಡಬ್ಲ್ಯೂಃ2

| | |
|---|---|
| ಸಾಕ್ಷಿಯ ಹೆಸರುಃ | ಶ್ರೀ. ಸೋಮಶೇಖರ ಪರಶುರಾಮ ಕಾಮಕರ |
| ತಂದೆಯ ಹೆಸರುಃ | ಪರಶುರಾಮ ಕಾಮಕರ |
| ವಯಸ್ಸುಃ | 29 ವರ್ಷ |
| ಉದ್ಯೋಗಃ | ಚಾಲಕ |
| ವಾಸಃ | ಮಲಪ್ರಭಾ ನಗರ ವಡಗಾಂವ, ಬೆಳಗಾವಿ |

**ದಿನಾಂಕಃ 09.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

2025 ರ ಜೂನ್ ಅಥವಾ ಜುಲೈ ತಿಂಗಳು ಇರಬಹುದು, ನಾನು ಹಾಗೂ ನನ್ನ ಸ್ನೇಹಿತ ಚಾಸಾ 3 ರವರು ರಾಮದೇವ ಹೊಟೆಲ್ ಬಳಿ ಇದ್ದೆವು. ಆಗ ಸಿಸಿಬಿ ಪೋಲಿಸರು ನಮ್ಮನ್ನು ಕರೆದುಕೊಂಡು ಸಿಸಿಬಿ ಠಾಣೆಗೆ ಹೋಗಿರುತ್ತಾರೆ. ಅಲ್ಲಿ ನನಗೆ ಒಂದು ದಾಖಲೆಯನ್ನು ಕೊಟ್ಟು ಸಹಿ ಪಡೆದುಕೊಂಡಿರುತ್ತಾರೆ. ಈಗ ಸಾಕಷ್ಟು ದಿನಗಳು ಆಗಿರುವುದರಿಂದ ನನಗೆ ನೆನಪಿಲ್ಲ. ಸದರಿ ದಾಖಲೆಯನ್ನು ಈಗ ತೋರಿಸಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ನಿ.ಪಿ 9 ಎಂದು ಗುರುತಾದ ದಾಖಲೆಯನ್ನು ನೋಡಿ ಅದರಲ್ಲಿ ನನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಆದರೆ ನಾನು ಸಹಿ ಮಾಡುವ ಕಾಲಕ್ಕೆ ಆ ದಾಖಲೆ ಖಾಲಿ ಇತ್ತು ಎಂದು ಹೇಳುತ್ತಾರೆ. ಸಹಿಗಳನ್ನು ಈಗ ನಿ.ಪಿ.9(ಬಿ) ಹಾಗೂ ನಿ.ಪಿ.9(ಸಿ) ಎಂದು ಗುರುತಿಸಲಾಯಿತು. ಅದು ಈ ಪ್ರಕರಣದಲ್ಲಿ ದಾಳಿ ಅಧಿಕಾರಿಗೆ ನೀಡಿದ್ದಾನೆ ಎನ್ನಲಾದ ಪಂಚ ನೊಟಿಸು ಇರುತ್ತದೆ. ನಂತರ ನಮ್ಮನ್ನು ಜೀಪನಲ್ಲಿ ಕರೆದಕೊಂಡು ಹೋಗಿರುತ್ತಾರೆ. ಆದರೆ ಅದು ಯಾವ ಜಾಗ ಎಂದು ಈಗ ನನಗೆ ನೆನಪಿಲ್ಲ. ಆ ಕಾಲಕ್ಕೆ ಪೋಲಿಸರು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಹಿಡಿದುಕೊಂಡಿದ್ದರು ಆಗ ನಮ್ಮನ್ನು ಸಹ ನಿಲ್ಲಿಸಿ ಪೊಟೊ ಹಾಗೂ ವಿಡಿಯೋ

ಮಾಡಿಕೊಂಡಿರುತ್ತಾರೆ. ಈ ವಿಚಾರ ಬಿಟ್ಟು ನನಗೆ ಬೇರೆ ವಿಚಾರ ಗೊತ್ತಿರುವುದಿಲ್ಲ. ಆರೋಪಿಯನ್ನು ಹಿಡಿದುಕೊಂಡಿದ್ದ ಜಾಗದಲ್ಲಿ ಪೊಟೊ ಮತ್ತು ವಿಡಿಯೋ ಮಾಡಿದ ನಂತರ ನಮ್ಮನ್ನು ಬಿಟ್ಟು ಕಳುಹಿಸಿರುತ್ತಾರೆ. ಆದ್ದರಿಂದ ನಮಗೆ ಬೇರೆ ಯಾವುದೇ ವಿಚಾರ ಗೊತ್ತಿಲ್ಲಾ. ಬೇರೆ ಯಾವುದೇ ಕಛೇರಿಗಳಿಗೆ ಹೋಗಿರುವುದಿಲ್ಲ. ಅದು ಬಿಟ್ಟು ಬೇರೆ ಯಾವುದೇ ವಿಚಾರ ನನಗೆ ನೆನಪಿಲ್ಲ. ಸಾಕ್ಷಿಯು ಈಗಾಗಲೇ ನಿ.ಪಿ.4 ಎಂದು ಗುರುತಾದ ದಾಖಲೆಯನ್ನು ನೋಡಿ ಅದರಲ್ಲಿ ನನ್ನ ಸಹಿಗಳು ಇವೆ ಎಂದು ಹೇಳುತ್ತಾನೆ. ಅವುಗಳನ್ನು ನಿ.ಪಿ.4(ಡಿ)ಯಿಂದ ನಿ.ಪಿ.4(ಜಿ)ಎಂದು ಗುರುತಿಸಲಾಯಿತು. ಸದರಿ ದಾಖಲೆಯೂ ಈ ಪ್ರಕರಣದ ಶೋಧನಾ ಪಂಚನಾಮೆಯಾಗಿದ್ದು ಅದರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ. ಈಗಾಗಲೇ ನಿ.ಪಿ.5 ಎಂದು ಗುರುತಾದ ದಾಖಲೆಯನ್ನು ತೋರಿಸಿದ್ದು ಅದರಲ್ಲಿರುವ ಸಹಿ ನನ್ನದು ಅಲ್ಲ ಎಂದು ಹೇಳುತ್ತಾರೆ. ಆರೋಪಿತನಿಂದ ಪೋಲಿಸರು ಒಂದು ಮೊಬೈಲ ಪೊನನ್ನು ಜಪ್ತು ಮಾಡಿದ್ದನ್ನು ನೋಡಿದ್ದೆನೆ. ಸದರಿ ಮೊಬೈಲ ಪೊನನ್ನು ನೋಡಿದರೆ ಗುರುತಿಸುತ್ತೇನೆಂದು ಹೇಳುತ್ತಾರೆ. ಈಗಾಗಲೇ ಮು. ಮಾ. 1 ಎಂದು ಗುರುತಾದ ಮೊಬೈಲ ಪೋನನ್ನು ಇದೇ ಮೊಬೈಲನ್ನು ಆರೋಪಿತನಿಂದ ಜಪ್ತು ಮಾಡಿದ್ದು ಎಂದು ಹೇಳುತ್ತಾರೆ. ಸದರಿ ಮೊಬೈಲ ಪೊನನ್ನು ಸಹ ಜಪ್ತು ಮಾಡುವ ಕಾಲಕ್ಕೆ ಪೊಟೊ ತೆಗೆದಿರುತ್ತಾರೆ. ಅದನ್ನು ಪೋಲಿಸ ಠಾಣೆಯಲ್ಲಿ ಜಪ್ತು ಮಾಡಿರುತ್ತಾರೆ. ಈಗಾಗಲೇ ಮು. ಮಾ. 2 ರಿಂದ 4 ಎಂದು ಗುರುತಾದ ವಸ್ತುಗಳ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ನನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಅವುಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ ಎಂದು ಹೇಳುತ್ತಾರೆ.

2. ಈಗಾಗಲೇ ನಿ.ಪಿ.14 ಎಂದು ಗುರುತಾದ ಪೆನಡ್ರೈವನಲ್ಲಿರುವ ಒಂದು ದೃಶ್ಯಾವಳಿಯನ್ನು ಸಾಕ್ಷಿಗೆ ತೊರಿಸಿದ್ದು ಅದನ್ನು ನೋಡಿ ಅದರಲ್ಲಿ ಈ ಪ್ರಕರಣದ ಆರೋಪಿ, ನಾನು, ಚಾಸಾ 3, ಪೋಲಿಸರು ಇದ್ದು, ಆರೋಪಿಯನ್ನು ಪೋಲಿಸರು ನಿನ್ನ ಬಳಿ ಏನು ಇದೆ ಎಂದು ಕೇಳಿದ್ದು ಅದಕ್ಕೆ ಆರೋಪಿ ನನ್ನ ಬಳಿ ಪನ್ನಿ ಅಥವಾ ಹೆರಾಯಿನ ಎಂಬ ವಸ್ತು ಇದೆ ಎಂದು ಹೇಳಿರುತ್ತಾನೆ. ಆ ವಿಚಾರವನ್ನು ನನ್ನ ಮುಂದೆಯೂ ಹೇಳಿದ್ದರು ಎಂದು ಹೇಳುತ್ತಾರೆ. ಅದೇ ರೀತಿ ಅದರಲ್ಲಿ ಪೋಲಿಸರು ಆರೋಪಿಯನ್ನು ಹಿಡಿದುಕೊಂಡಾಗ ಪೋಲಿಸರು ತಮ್ಮ ಹಾಗೂ ಪಂಚರಾದ ನಮ್ಮ ವಿವರಗಳನ್ನು ಸಹ ಆರೋಪಿಗೆ ಹೇಳಿದರು

ಎಂದು ಹೇಳುತ್ತಾರೆ. ಸಾಕ್ಷಿಯು ಸದರಿ ಘಟನೆಯು ರಾಮದೇವ ಹೊಟೆಲನ ಹಿಂಭಾಗ ಇರುವ ಒಂದು ಖುಲ್ಲಾ ಜಾಗೆ ಆಗಿರುತ್ತದೆ. ಸಾಕ್ಷಿಯು ಮತ್ತೊಂದು ವಿಡಿಯೋವನ್ನು ನೋಡಿ ಅದರಲ್ಲಿ ಪೋಲಿಸರು ನಮ್ಮ ಸಮಕ್ಷಮ ತಮ್ಮ ಅಂಗಶೋಧನೆಯನ್ನು ಮಾಡಿ ಅವರ ಬಳಿ ಯಾವುದೇ ಅಕ್ಷೇಪಾರ್ಹ ವಸ್ತುಗಳು ಇಲ್ಲಾ ಎಂದು ಖಾತರಿ ಪಡಿಸಿರುತ್ತಾರೆ. ಆ ಕಾಲಕ್ಕೆ ನಾವು ಸಹ ನಮ್ಮ ಅಂಗಶೋಧನೆಯನ್ನು ಮಾಡಿರುತ್ತೇವೆಂದು ಹೇಳುತ್ತಾರೆ.

**ಈ ಹಂತದಲ್ಲಿ ಸಾಕ್ಷಿಯು ತನ್ನ ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಬೇಕು ಎಂದು ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

sd/-

(ಗಂಗಾಧರ ಕೆ.ಎನ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬೆಳಗಾವಿ.